ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 14-9-2016

# ಮಾಧ್ಯಮ ಪ್ರತಿನಿಧಿಗಳ ಗಮನಕ್ಕೆ

ಮೈಸೂರು ದಸರಾ ಮಹೋತ್ಸವ 2016 ರ ವರದಿಗಾಗಿ ಬೆಂಗಳೂರಿನಿಂದ ತೆರಳಲಿರುವ ಮಾಧ್ಯಮ ಪ್ರತಿನಿಧಿಗಳಿಗೆ ಮೈಸೂರು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಛೇರಿ ವತಿಯಿಂದ ದಸರಾ ಪಾಸ್ ಅನ್ನು ವಿತರಿಸಲಾಗುವುದು. ಆದ್ದರಿಂದ ದಸರಾ ಮಹೋತ್ಸವದ ವರದಿಗೆ ತೆರಳುವ ಮಾಧ್ಯಮ ಪ್ರತಿನಿಧಿಗಳು ಇ ಮೇಲ್‌ನಲ್ಲಿ ಕಳುಹಿಸಿರುವ ಅರ್ಜಿ ನಮೂನೆಯಲ್ಲಿ ಅರ್ಜಿಯನ್ನು ಭರ್ತಿಮಾಡಿ ಸೆಪ್ಟೆಂಬರ್ 19 ರೊಳಗೆ ಸುದ್ದಿ ಮತ್ತು ಪತ್ರಿಕಾ ಶಾಖೆಗೆ ಸಲ್ಲಿಸಬೇಕಾಗಿ ತಿಳಿಸಲಾಗಿದೆ.

ರಾಜ್ಯ ಮಟ್ಟದ ದಿನ ಪತ್ರಿಕೆಗಳಿಂದ ಮಾನ್ಯತೆ ಪಡೆದ ಓರ್ವ ವರದಿಗಾರರು ಹಾಗೂ ಓರ್ವ ಛಾಯಾಗ್ರಾಹಕರು, ವಿದ್ಯುನ್ಮಾನ ಮಾಧ್ಯಮಗಳಿಂದ ಮಾನ್ಯತೆ ಇಬ್ಬರು ವರದಿಗಾರರು ಮತ್ತು ಇಬ್ಬರು ವಿಡಿಯೋಗ್ರಾಫರ್‌ಗಳಿಗೆ ಅವಕಾಶವಿರುತ್ತದೆ. (ಅರ್ಜಿಯಲ್ಲಿ ಒಂದು ಭಾವಚಿತ್ರವನ್ನು ಅಂಟಿಸುವುದರ ಜೊತೆಗೆ ಪಾಸ್‌ಪೋರ್ಟ್ ಅಳತೆಯ ಒಂದು ಭಾವಚಿತ್ರವನ್ನು ಸಲ್ಲಿಸುವುದು)

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮೈಸೂರು

ಮೈಸೂರು ದಸರಾ ಮಹೋತ್ಸವ-2016

ಮಾಧ್ಯಮ ಪಾಸ್ ಕೋರಿಕೆ ನಮೂನೆ

ಹೆಸರು:

NAME:

ಹುದ್ದೆ:

ಪಾಸ್‌ಪೋರ್ಟ್ ಅಳತೆ ಭಾವಚಿತ್ರ

**DESIGNATION:**

**ಪ್ರತಿನಿಧಿಸುವ ಮಾಧ್ಯಮ:**
**NAME OF MEDIA:**

**ದೂರವಾಣಿ ಸಂಖ್ಯೆ:**

**ಮೊಬೈಲ್ ಸಂಖ್ಯೆ:**

**ವಿಳಾಸ:**

**ಕೋರಿಕೆದಾರರ ಸಹಿ** **ಸಂಸ್ಥೆ ಮುಖ್ಯಸ್ಥರ ಸಹಿ ಹಾಗೂ**

**ಮೊಹರು**

**(ಅರ್ಜಿಯಲ್ಲಿ ಒಂದು ಭಾವಚಿತ್ರವನ್ನು ಅಂಟಿಸುವುದು ಹಾಗೂ ಅರ್ಜಿಯೊಂದಿಗೆ ಪ್ರತ್ಯೇಕವಾಗಿ ಒಂದು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಭಾವಚಿತ್ರದ ಹಿಂಭಾಗದಲ್ಲಿ ಹೆಸರು, ಪದನಾಮ ಹಾಗೂ ಮಾಧ್ಯಮದ ಹೆಸರು ನಮೂದಿಸಿ ನೀಡುವುದು. ಹೆಸರು ಹುದ್ದೆ ಹಾಗೂ ಪ್ರತಿನಿಧಿಸುವ ಮಾಧ್ಯಮವನ್ನು ಆಂಗ್ಲ ಭಾಷೆಯಲ್ಲೂ ಸಹ ಭರ್ತಿ ಮಾಡುವುದು.)**

# ಪತ್ರಿಕಾ ಪ್ರಕಟಣೆ

## ಈ ವಾರದ "ಬೆಳ್ಳಿ ಹೆಜ್ಜೆ" ಯಲ್ಲಿ ಎಂ. ಭಕ್ತವತ್ಸಲ

**ಬೆಂಗಳೂರು, ಜುಲೈ 15 (ಕರ್ನಾಟಕ ವಾರ್ತೆ)**

**ಕರ್ನಾಟಕ ಚಲನಚಿತ್ರ ಅಕಾಡೆಮಿ ಪ್ರತಿ ಶನಿವಾರ ನಡೆಸುವ ಬೆಳ್ಳಿ ಹೆಜ್ಜೆ ಕಾರ್ಯಕ್ರಮದಲ್ಲಿ ಸೆಪ್ಟೆಂಬರ್ 17 ರ ಶನಿವಾರ ಸಂಜೆ 5-30 ಗಂಟೆಗೆ ನಗರದ ಕುಮಾರ**

ಪಾರ್ಕ್ ರಸ್ತೆಯಲ್ಲಿರುವ ಗಾಂಧಿ ಭವನದ ಮಹಾದೇವ ದೇಸಾಯಿ ಸಭಾಂಗಣದಲ್ಲಿ ನಡೆಯುವ "ಬೆಳ್ಳಿ ಹೆಜ್ಜೆ" ಯಲ್ಲಿ ನಮ್ಮೊಂದಿಗೆ ಸಿನಿ ತಜ್ಞರು, ಚಲನಚಿತ್ರ ಪ್ರದರ್ಶಕರು, ವಿತರಕರು ಹಾಗೂ ನಿರ್ಮಾಪಕರು ಆದ ಎಂ. ಭಕ್ತವತ್ಸಲ ಅವರು ಪಾಲ್ಗೊಳ್ಳುವರು ಎಂದು ಅಕಾಡೆಮಿ ರಿಜಿಸ್ಟ್ರಾರ್ ಹೆಚ್. ಬಿ. ದಿನೇಶ್ ತಿಳಿಸಿದ್ದಾರೆ.

ಅಂದು " ಬೆಳ್ಳಿ ಹೆಜ್ಜೆ " ಕಾರ್ಯಕ್ರಮದಲ್ಲಿ ನಿವೃತ್ತ ಅಪರ ಮುಖ್ಯ ಕಾರ್ಯದರ್ಶಿ ಎನ್. ಚಿರಂಜೀವಿ ಸಿಂಗ್ ಅವರು ಎಂ. ಭಕ್ತವತ್ಸಲ ಅವರು ಬರೆದಿರುವ "ಗೋಪಿ ಸರ್ಕಲ್" ಪುಸ್ತಕವನ್ನು ಬಿಡುಗಡೆ ಮಾಡಲಿದ್ದಾರೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಎನ್. ಆರ್. ವಿಶುಕುಮಾರ್ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ಸಾ.ರಾ. ಗೋವಿಂದು ಅವರು ಪಾಲ್ಗೊಳ್ಳುವರು. ಸಮಾರಂಭದ ಅಧ್ಯಕ್ಷತೆಯನ್ನು ಅಕಾಡೆಮಿ ಅಧ್ಯಕ್ಷ ಎಸ್. ವಿ. ರಾಜೇಂದ್ರಸಿಂಗ್ ಬಾಬು ವಹಿಸುವರು ಎಂದು ಅವರು ತಿಳಿಸಿದ್ದಾರೆ.

**ಪಿಎಸ್ಐ:ಜಿಪಿಆರ್**

# ಮುಂದೂಡಿಕೆ

**ಬೆಂಗಳೂರು, ಜುಲೈ 15 (ಕರ್ನಾಟಕ ವಾರ್ತೆ)**

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ಅಕ್ಟೋಬರ್ 1 ರ ವಿಶ್ವ ಹಿರಿಯ ನಾಗರಿಕರ ದಿನಾಚರಣೆಯ ಅಂಗವಾಗಿ ಸೆಪ್ಟೆಂಬರ್ 15 ಮತ್ತು 16 ರಂದು ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ನಡೆಸಲು ತೀರ್ಮಾನಿಸಲಾಗಿತ್ತು.

ಅದರೆ ಅನಿವಾರ್ಯ ಕಾರಣಗಳಿಂದ ಈ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಮುಂದೂಡಲಾಗಿದೆ ಎಂದು ಇಲಾಖಾ ಪ್ರಕಟಣೆ ತಿಳಿಸಿದೆ.

**ಪಿಎಸ್ಐ:ಜಿಪಿಆರ್**

# <u>ಮಹಾತ್ಮ ಗಾಂಧೀ ಸೇವಾ ಪ್ರಶಸ್ತಿ – ಕರ್ನಾಟಕ  ಆಯ್ಕೆಗೆ ಅರ್ಜಿ ಆಹ್ವಾನ</u>

**ಬೆಂಗಳೂರು ಸೆಪ್ಟೆಂಬರ್ 14 – (ಕರ್ನಾಟಕ ವಾರ್ತೆ)**

ರಾಜ್ಯ ಸರ್ಕಾರವು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಸ್ಥಾಪಿಸಿರುವ ಐದು ಲಕ್ಷ ರೂಪಾಯಿ ನಗದನ್ನು ಒಳಗೊಂಡ "ಮಹಾತ್ಮಗಾಂಧೀ ಸೇವಾ ಪ್ರಶಸ್ತಿ–ಕರ್ನಾಟಕ"ಗೆ ಪ್ರಸಕ್ತ ಸಾಲಿಗೆ ಅರ್ಹ ಸಾಧಕರನ್ನು ಅಥವಾ ಸಂಘ ಸಂಸ್ಥೆಗಳನ್ನು ಆಯ್ಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸಾರ್ವಜನಿಕ ಜೀವನದಲ್ಲಿ ಮಹಾತ್ಮಗಾಂಧೀಜಿಯವರ ಆದರ್ಶಗಳನ್ನು ಅಳವಡಿಸಿಕೊಂಡು ಜೀವನ ನಡೆಸುತ್ತಿರುವ ಕನಿಷ್ಠ 60 ವರ್ಷಗಳಾಗಿರುವ ವ್ಯಕ್ತಿಗಳು ಅಥವಾ 25 ವರ್ಷಗಳು ತುಂಬಿರುವ ಸೇವಾ ಸಂಸ್ಥೆಗಳನ್ನು ಈ ಪ್ರಶಸ್ತಿಗೆ ಪರಿಗಣಿಸಲಾಗುವುದು. ಪ್ರಶಸ್ತಿಯನ್ನು ಆಯ್ಕೆ ಮಾಡಲು ಆಯ್ಕೆ ಸಮಿತಿಯನ್ನು ರಚಿಸಲಾಗುವುದು. 2016 ರ ಅಕ್ಟೋಬರ್ 02 ರಂದು ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಮಹಾತ್ಮಗಾಂಧೀಜಿಯವರು ಪ್ರಚುರುಪಡಿಸಿದ ಜನಪರ ಕಾರ್ಯಕ್ರಮಗಳಾದ ಅಸ್ಪೃಶ್ಯತೆ ನಿವಾರಣೆ, ಅಹಿಂಸೆ, ಮಹಿಳಾ ಸಬಲೀಕರಣ, ಗ್ರಾಮೀಣ ನೈರ್ಮಲ್ಯ, ಮದ್ಯಪಾನ ವಿರೋಧಿ ನೀತಿ, ಖಾದಿ ಮತ್ತು ಸ್ವದೇಶಿವಸ್ತು ಬಳಕೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಉದ್ಧಾರ, ಈ ಕ್ಷೇತ್ರಗಳಲ್ಲಿ ಸ್ವಯಂ ಪ್ರೇರಣೆಯಿಂದ ತೊಡಗಿರುವ ವ್ಯಕ್ತಿಗಳು ಅಥವಾ ಸಂಸ್ಥೆಗಳು ಈ ಪ್ರಶಸ್ತಿಗೆ ಅರ್ಜಿ ಸಲ್ಲಿಸಬಹುದು. ಸಂಘ ಸಂಸ್ಥೆಗಳು ಅಥವಾ ವ್ಯಕ್ತಿಗಳು ಶಿಫಾರಸ್ಸನ್ನು ಕೂಡ ಮಾಡಬಹುದಾಗಿದೆ. ಸೆಪ್ಟೆಂಬರ್ 20, 2016 ರ ಒಳಗಾಗಿ ಅರ್ಜಿಗಳನ್ನು ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ವಾರ್ತಾ ಸೌಧ, ನಂ. 17, ಭಗವಾನ್ ಮಹಾವೀರ ರಸ್ತೆ (ಇನ್‍ಫೆಂಟ್ರಿ ರಸ್ತೆ), ಬೆಂಗಳೂರು–560 001 ಅಥವಾ ಇ–ಮೇಲ್ : vartheinfohub@gmail.com ವಿಳಾಸಕ್ಕೆ ಕಳುಹಿಸಬಹುದಾಗಿದೆ.

## ಪಿಚ್ ಟು ದಿ ಗವರ್ನ್ ಮೆಂಟ್'- ಹ್ಯಾಕಥಾನ್ ಸ್ಪರ್ಧಾ ಕಾರ್ಯಕ್ರಮ

**ಬೆಂಗಳೂರು ಸೆಪ್ಟೆಂಬರ್ 14 – (ಕರ್ನಾಟಕ ವಾರ್ತೆ)**

ಪ್ರವಾಸೋದ್ಯಮ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ನವ್ಯೋದ್ಯಮಗಳಿಂದ ತಂತ್ರಜ್ಞಾನ ಪಡೆದುಕೊಳ್ಳುವ 'ಪಿಚ್ ಟು ದಿ ಗವರ್ನ್ ಮೆಂಟ್'- ಎಂಬ ಹ್ಯಾಕಥಾನ್ ಸ್ಪರ್ಧಾ ಕಾರ್ಯಕ್ರಮವನ್ನು ಕರ್ನಾಟಕ ಸರ್ಕಾರವು ಹಮ್ಮಿಕೊಂಡಿದೆ.

ಪ್ರವಾಸೋದ್ಯಮ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ನವ್ಯೋದ್ಯಮಗಳಿಂದ ನವನವೀನ ಪರಿಹಾರಗಳು ಮತ್ತು ಉತ್ಪನ್ನಗಳನ್ನು ಸಮೂಹ-ಸಂಪನ್ಮೂಲವಾಗಿಸಲು (crowd-source) ರಾಜ್ಯ ಪ್ರವಾಸೋದ್ಯಮ ಇಲಾಖೆಯು ಕರ್ನಾಟಕ ಸರ್ಕಾರದ ಮಾಹಿತಿ

ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಇಲಾಖೆಯ ಕೆಬಿಟ್ಸ್ ಸಂಸ್ಥೆಯ ಕರ್ನಾಟಕ ಸ್ಟಾರ್ಟ್ ಅಪ್ ಕೋಶದ ಸಹಯೋಗದೊಂದಿಗೆ ವಿಶ್ವ ಪ್ರವಾಸೋದ್ಯಮ ದಿನವಾದ 27, ಸೆಪ್ಟೆಂಬರ್ 2016ರ ಸಂದರ್ಭಕ್ಕೆ ಮುಕ್ತ ಸವಾಲಿನ ಸ್ಪರ್ಧೆ ಆಯೋಜಿಸುತ್ತಿದೆ.

ವಿಶ್ವದ 15 ಮೇರು ನವ್ಯೋದ್ಯಮ ಪರ್ಯಾವರಣಗಳಲ್ಲಿ ಭಾರತದ ಏಕೈಕ ನಗರವಾಗಿ ಬೆಂಗಳೂರು ಹೊರಹೊಮ್ಮಿದೆ. ಭಾರತದ ಮೊಟ್ಟಮೊದಲ ಬಹುವಲಯ ನವ್ಯೋದ್ಯಮ ನೀತಿಯನ್ನು ಕಳೆದ ವರ್ಷ ರಾಜ್ಯ ಸರ್ಕಾರವು ಘೋಷಿಸಿದ್ದು, ಈವರೆಗೆ ರಾಜ್ಯದಲ್ಲಿ ನಾವೀನ್ಯತೆ ಪ್ರೇರಿತ ನವ್ಯೋದ್ಯಮವನ್ನು ಪ್ರೋತ್ಸಾಹಿಸಲು ಅನೇಕ ಉಪಕ್ರಮಗಳನ್ನು ಪ್ರಾರಂಭಿಸಿದೆ.

ತಂತ್ರಜ್ಞಾನ ಅಳವಡಿಸಿಕೊಳ್ಳುವಲ್ಲಿ ಪ್ರವರ್ತಕವಾಗಿರುವ ಸಂಪ್ರದಾಯಕ್ಕೆ ತಕ್ಕಂತೆ, ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಯಲ್ಲಿ ಉತ್ಪನ್ನ/ ಪರಿಹಾರಗಳನ್ನು ಅಳವಡಿಸಿಕೊಂಡು ಜಾರಿಗೊಳಿಸಲು ರಾಜ್ಯ ಸರ್ಕಾರವು ಪೂರ್ವಹಂತದ ಸ್ಟಾರ್ಟ್ ಅಪ್ ಗಳಿಂದ ಅಂತಹ ಉತ್ಪನ್ನ/ ಪರಿಹಾರಗಳನ್ನು ಪ್ರಸ್ತುತಪಡಿಸಲು ಪ್ರಸ್ತಾವನೆಗಳನ್ನು ಆಮಂತ್ರಿಸುತ್ತಿದೆ.

ಪ್ರವಾಸೋದ್ಯಮಕ್ಕೆ ಸೌಲಭ್ಯ ಒದಗಿಸುವ ಹಾಗೂ ಅದನ್ನು ಪ್ರೋತ್ಸಾಹಿಸುವ ಉತ್ಪನ್ನಗಳು ಹಾಗೂ ಅನ್ವಯಿಕೆಗಳಿರುವ ನವ್ಯೋದ್ಯಮಗಳು ಸ್ಟಾರ್ಟ್ ಅಪ್ ಕರ್ನಾಟಕ http://www.startup.karnataka.gov.in/events ಮೂಲಕ ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

ಆಯ್ಕೆಗೊಳ್ಳುವ 3 ಅತ್ಯುತ್ತಮ ನವ್ಯೋದ್ಯಮಗಳು ಕರ್ನಾಟಕ ಸರ್ಕಾರದ ಐಡಿಯಾ2ಪಿಓಸಿ ಅನುದಾನಕ್ಕಾಗಿ ಅರ್ಹರಾಗುತ್ತಾರೆ. ಉತ್ಪನ್ನವೊಂದನ್ನು ಅದರ ಪ್ರಾರಂಭಿಕ ಹಂತದಿಂದ ಅಭಿವೃದ್ಧಿಪಡಿಸಲು ಈ ಅನುದಾನದಡಿಯಲ್ಲಿ ರೂ.50.00 ಲಕ್ಷಗಳವರೆಗೆ ಹಣಕಾಸು ಬೆಂಬಲ ಒದಗಿಸಲಾಗುತ್ತಿದೆ.

ಕರ್ನಾಟಕ ಸರ್ಕಾರದ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಶ್ರೀ. ಪ್ರಿಯಾಂಕ್ ಖರ್ಗೆ ಅವರು "ಇಂತಹ ಉಪಕ್ರಮವು ದೇಶದಲ್ಲೇ ಪ್ರಪ್ರಥಮ ರೀತಿಯದ್ದಾಗಿದ್ದು, ಪ್ರವಾಸೋದ್ಯಮ ಕ್ಷೇತ್ರದಲ್ಲಿನ ಸ್ಟಾರ್ಟ್ ಅಪ್ ಗಳಿಗೆ ತಮ್ಮ ತಂತ್ರಜ್ಞಾನ ಪರಿಹಾರಗಳನ್ನು ಪ್ರದರ್ಶಿಸಲು ಹಾಗೂ ವಿಶ್ವ ಪ್ರವಾಸೋದ್ಯಮ ದಿನದ ಸಂದರ್ಭದಲ್ಲಿ ಸರ್ಕಾರದ ಕಾರ್ಯದೊಳಗೆ ಮತ್ತು ಕೈಗಾರಿಕಾ ತಜ್ಞರ ತಂಡದೊಳಗೆ ಸೇರಿಕೊಳ್ಳಲು ಇದೊಂದು ಉತ್ತಮ ಅವಕಾಶವಾಗಿದೆ. ರಾಜ್ಯದಲ್ಲಿ, ವಿಶೇಷವಾಗಿ ಬೆಂಗಳೂರಿನಲ್ಲಿ ಪ್ರವಾಸೋದ್ಯಮವನ್ನು ಅಥವಾ ಪ್ರವಾಸಿಗರ ಅನುಭವಕ್ಕೆ ಪ್ರೇರಕವಾಗಲು ಕೆಲವು ಪರಿಕಲ್ಪನೆಗಳನ್ನು ಅಳವಡಿಸಿಕೊಳ್ಳಬಹುದೆಂದು ನಾನು ಆಶಿಸುತ್ತೇನೆಂದು ಸಚಿವರು ತಿಳಿಸಿದ್ದಾರೆ.

## Government of Karnataka launches the *"Pitch to the Government"* – hackathon aimed towards technology adoption from startups working in the Tourism sector

**Bangalore, September 14, 2016:**

On the occasion of the World Tourism Day on the 27th of September 2016, the Department of Tourism in association with the Karnataka Startup Cell, KBITS, Department of IT and BT, Government of Karnataka is conducting an open challenge to crowd-source innovative solutions and products from startups working in the area of Tourism.

Bangalore is the only Indian city to figure in the top 15 startup ecosystems in the world. The State Government announced India's first multi sector startup policy last year and has since launched several initiatives to promote innovation-led entrepreneurship in the state.

Keeping with the tradition of being a pioneer in technology adoption, the State Government is inviting proposals from early stage startups to present their products / solutions for adoption and roll out in the Department of Tourism, Government of Karnataka.

Startups with products and applications that facilitate and promote Tourism may sign up and apply online at the Startup Karnataka portal @ http://www.startup.karnataka.gov.in/events . Last date for submission is 22nd September 2016. Preliminary screening shall be done and applicants shall be informed by the 23rd to be present for the **"Pitch to the Government"** event that will be conducted at 09.00 AM on 24th September 2016 at the Auditorium, BMTC office, BMTC Central Offices Building, 4th Floor, K.H. Road, Shanthinagar, Bangalore – 560027. The jury shall consist of eminent members of the startup ecosystem along with senior officials of Department of Tourism and IT & BT.

Top 3 startups shall be eligible for Government of Karnataka's Idea2PoC funding under which financial support upto Rs.50.00 Lakhs is extended to develop a product from inception stage. Winners shall have to register with Karnataka Startup Cell to be eligible for such funding. The winners shall deploy the solution in collaboration with the Department of Tourism with the objective of greater inward Tourism promotion in the State. The funds shall be released over a period of one year in tranches based on business plan of the project and the progress made in supervision of Tourism Department. A MoA to that effect shall be signed between the Department and the Startup. Since the intent is to deploy the solution within a short period, priority will be given to startups with products which are at a fairly advanced stage of development. Government of Karnataka reserves the right to reject all / any entry based on quality of application and pitch.

Sri. Priyank Kharge, IT & BT, Tourism, Government of Karnataka, said, "This is a first of its kind initiative in the country and a It is a great opportunity for startups in tourism sector to showcase their technology solutions and pitch to the government and a panel of industry experts directly on the occasion of World Tourism Day. I hope we can adopt a few ideas to boost tourism or tourist experiences in the State and Bengaluru.

The Karnataka startup cell at KBITS, Department of IT and BT is organizing this hackathon in association with NASSCOM and IAMAI.

jadiyappa/km